ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ, ಅದರಿಂದ ಆಗುವ ಬಿಡುಗಡೆ – ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯಲಿದ್ದಾರೆ. ಕಥೆಯ ತಂತ್ರ ಮತ್ತು ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಪುಟಗಳಲ್ಲಿ ದಾಖಲಾಗಲಿದೆ

***'ಮಯೂರ' ಕೇಳಿದ ಪ್ರಶ್ನೆಗಳಿಗೆ ನಟರಾಜ್ ಹುಳಿಯಾರ್ ಅವರು ಕೊಟ್ಟ ಉತ್ತರಗಳು ಈ ಕೆಳಗಿವೆ:***

● **ಕತೆಯೊಂದನ್ನು ಬರೆಯುವ ಪ್ರಕ್ರಿಯೆ ಎಷ್ಟರಮಟ್ಟಿಗೆ ಪ್ರಜ್ಞಾಪೂರ್ವಕ?**

ನನ್ನ ಅನುಭವದಲ್ಲಿ ಕಥಾ ಬರವಣಿಗೆ ಪ್ರಜ್ಞಾಪೂರ್ವಕ ಹಾಗೂ ಅಪ್ರಜ್ಞಾಪೂರ್ವಕ ಈ ಎರಡೂ ನೆಲೆಗಳಲ್ಲಿ ನಡೆಯುತ್ತಿರುತ್ತದೆ. ಕೆಲವೊಮ್ಮೆ ಕತೆಯ ವಸ್ತು, ಪಾತ್ರಗಳು ಹಾಗೂ ಕತೆಯೊಳಗಿನ ಬಿಕ್ಕಟ್ಟುಗಳು ನನ್ನ ಕತೆಯನ್ನು ಎಲ್ಲೋ ಕರೆದೊಯ್ದು ನಿಲ್ಲಿಸಿದಾಗ, 'ಅರೆ! ಇಲ್ಲಿಗೆ ಹೇಗೆ ಬಂದೆ' ಎನ್ನಿಸಿ ಅಚ್ಚರಿಯಾಗುತ್ತದೆ. ಈಗ ಹಿಂತಿರುಗಿ ನೋಡಿದರೆ, ನನ್ನ ಬಹುತೇಕ ಕತೆಗಳು ತಮ್ಮ ದಿಕ್ಕುಗಳನ್ನು ತಾವೇ ನಿರ್ಧರಿಸಿಕೊಂಡಂತಿವೆ ಹಾಗೂ ಪಾತ್ರಗಳು, ಘಟನೆಗಳು ತಮಗೆ ಇಷ್ಟ ಬಂದಂತೆ, ತಮ್ಮ ಆಂತರಿಕ ತರ್ಕಕ್ಕೆ ತಕ್ಕಂತೆ ಬೆಳೆದುಕೊಂಡಿವೆ ಎನ್ನಿಸುತ್ತದೆ. ನನ್ನ ಕೆಲವು ಕತೆಗಳ ಅಂತ್ಯವನ್ನು ಮಾತ್ರ ಓದುಗರನ್ನು ಮನಸ್ಸಿನಲ್ಲಿಟ್ಟುಕೊಂಡೋ ಅಥವಾ 'ಎಫೆಕ್ಟಿನ' ದೃಷ್ಟಿಯಿಂದಲೋ ರೂಪಿಸಿರಲೂಬಹುದು; ಹಾಗೆಯೇ ಕತೆಯಲ್ಲೇ ವಿಕಾಸಗೊಳ್ಳುವ ಕಾಣ್ಕೆಯೂ ಕೆಲ ಬಗೆಯ ಅಂತ್ಯಗಳನ್ನು ನಿರ್ಧರಿಸಿರಬಹುದು.

● **ನಿಮ್ಮ ಅನುಭವ ಹಾಗೂ ಓದು ನಿಮ್ಮ ಕತೆಗಳಿಗೆ ಹೇಗೆ ನೆರವಾಗಿದೆ?**

ಬರೆಯುವವನ ಅನುಭವ ಎನ್ನುವುದು ಯಾವಾಗಲೂ ಸೀಮಿತ ಅರ್ಥದಲ್ಲಿ ಅವನದ್ದೇ ಆದ 'ಸ್ವಂತ' ಅನುಭವವಾಗಿರಬೇಕಿಲ್ಲ. ಕತೆಗಾರನೊಬ್ಬನ ಪಾತ್ರ ಸೃಷ್ಟಿಯಲ್ಲಿ ಹೇಗೆ ಪರಕಾಯ ಪ್ರವೇಶ ನಡೆಯುತ್ತಿರುತ್ತದೋ ಹಾಗೆಯೇ ಇತರರ ಅನುಭವಗಳನ್ನು ತನ್ನದಾಗಿಸಿಕೊಂಡು ಆ ಅನುಭವಗಳನ್ನು ಶೋಧಿಸುವ ಕೆಲಸವೂ ನಡೆಯುತ್ತಿರುತ್ತದೆ. ಹೀಗೆ ಕತೆಗಾರನ ಅನುಭವಕ್ಕೆ ಬಂದ ಇತರರ ಸತ್ಯಗಳು ಕತೆಯಲ್ಲಿ ಇನ್ನೇನೋ ಆಗಿ ಮಾರ್ಪಾಡಾಗುತ್ತಿರುತ್ತವೆ. ಉದಾಹರಣೆಗೆ, ನೀವು ಒಂದು ಕತೆಯಲ್ಲಿ ಬಡಗಿಯೊಬ್ಬನ ಬದುಕಿನ ಹಾಗೂ ವ್ಯಕ್ತಿತ್ವದ ಏರಿಳಿತಗಳನ್ನು ಸೃಷ್ಟಿಸುತ್ತಿದ್ದರೆ, ಬಡಗಿಯ ಪಾತ್ರಕ್ಕೆ ಅಧಿಕೃತತೆ ತರಲು ಅವನ ವೃತ್ತಿಯ ಕೆಲವಾದರೂ ಬಾಹ್ಯ ವಿವರಗಳನ್ನು ಸೃಷ್ಟಿಸಲೆತ್ನಿಸುತ್ತೀರಿ; ಹಲವೊಮ್ಮೆ ನಿಮ್ಮ ಭಾವಗಳು ಅಥವಾ ನೀವು ಅವರಿವರಲ್ಲಿ ಕಂಡ ಅಥವಾ ನೀವು ಕಲ್ಪಿಸಿಕೊಂಡ ಭಾವಗಳು ಕೂಡ ಆ ಪಾತ್ರದೊಳಗೆ ಸೇರಿಕೊಳ್ಳುತ್ತವೆ. ಇವೆಲ್ಲ ಎಷ್ಟು ಸಂಕೀರ್ಣವೆಂದರೆ, ಇವನ್ನು ಥಿಯರೈಸ್ ಮಾಡಿ ಸ್ಪಷ್ಟವಾಗಿ ಹೇಳುವುದು ಕಷ್ಟ. ಒಂದು ಕತೆಯಲ್ಲಿ